## ॥ ತೂಗೀರೆ ರಾಯರ ತೂಗೀರೆ ಗುರುಗಳ ॥

ತೂಗೀರೆ ರಾಯರ ತೂಗೀರೆ ಗುರುಗಳ
ತೂಗೀರೆ ಯತಿಕುಲ ತಿಲಕರ ।
ತೂಗೀರೆ ಯೋಗೀಂದ್ರ ಕರಕಮಲ ಪೂಜ್ಯರ
ತೂಗೀರೆ ಗುರು ರಾಘವೇಂದ್ರರ ॥

ಕುಂದಣ ಮಯವಾದ ಚಂದದ ತೊಟ್ಟಿಲೊಳಾ
ನಂದದಿ ಮಲಗ್ಯಾರೆ ತೂಗೀರೇ ।
ನಂದನ ಕಂದ ಮುಕುಂದ ಗೋವಿಂದನ
ಅಂದಾದಿ ಭಜಿಪರೆ ತೂಗೀರೇ ॥

ಶುದ್ಧ ಸಂಕಲ್ಪದಿ ಬದ್ಧ ನಿಜ ಭಕ್ತರ
ಉದ್ಧಾರ ಮಾಳ್ಪರ ತೂಗೀರೇ ।
ಶುದ್ಧ ಸಂಕಲ್ಪದಿ ಬದ್ಧ ನಿಜ ಭಕ್ತರ
ಯೋಗೀಶ ವಂದ್ಯರ ತೂಗೀರೇ ॥

ಭಜಕ ಜನರು ತಮ್ಮ ಭಜನೆಯ ಮಾಡಲು
ನಿಜಗತಿಯಿಪ್ಪರ ತೂಗೀರೇ ।
ನಿಜಗುರು ಜಗನ್ನಾಥ ವಿಠಲನ ಪಾದ
ಭಜನೆ ಮಾಳ್ಪರ ತೂಗೀರೇ ॥

http://www.yousigma.com